O.S.No.453/2013
PW -2

ದಿನಾಂಕ 07/09/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

**ಪಾಟೀ ಸವಾಲು:- ಶ್ರೀ ಹೆಚ್.ಟಿ.ಟಿ. ಪ್ರತಿವಾದಿ ಪರ ವಕೀಲರಿಂದ**

ವೆಂಕಟಲಕ್ಷ್ಮಮ್ಮ ಅಂದರೆ 4 ನೇ ಪ್ರತಿವಾದಿ ನನ್ನ ಹೆಂಡತಿ ಇರುತ್ತಾರೆ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ 5 ನಿವೇಶನಗಳು ಇದ್ದು ಅದರಲ್ಲಿ ಮೊದಲನೇಯದಾಗಿ ನಾಗರತ್ನಮ್ಮನಿಗೆ ನೀಡಿದ್ದು ಅದರ ಖಾತೆ ನಂ-233 ಇದ್ದು ಅದರ ವಿಸ್ತೀರ್ಣ ಪೂ-ಪ-14 ಅಡಿ , ಉ-ದ-26 ಅಡಿ ಇರುತ್ತದೆ, ಅದಕ್ಕೆ ಚಕ್ಕುಬಂದಿ ಪೂ-ಲಕ್ಷ್ಮಿಪತಿ ರವರ ನಿವೇಶನ , ಪ-ಖಾಲಿ ಜಾಗ ಮತ್ತು ನೀರು ಕಾಲುವೆ , ಉ-ಶಾಲೆಯ ಕಾಂಪೌಂಡ್ ಮತ್ತು ದ- ಮಧುಗಿರಿ - ಹಿಂದೂಪುರ ರಸ್ತೆ, 2 ನೇಯದಾಗಿ ಲಕ್ಷ್ಮಿಪತಿ ಆಂಜನಪ್ಪ ಅದರ ವಿಸ್ತೀರ್ಣ ಪೂ-ಪ-11 ವರೆ ಅಡಿ , ಉ-ದ-26 ಅಡಿ ಇದ್ದು ಅದಕ್ಕೆ ಚಕ್ಕುಬಂದಿ ಪೂ-ವೆಂಕಟಲಕ್ಷ್ಮಮ್ಮ ಮತ್ತು ರಾಜಣ್ಣ ರವರ ನಿವೇಶನ , ಪ- ನಾಗರತ್ನಮ್ಮನ ನಿವೇಶನ, ಉ-ಶಾಲೆಯ ಕಾಂಪೌಂಡ್ ಮತ್ತು ದ- ಮಧುಗಿರಿ - ಹಿಂದೂಪುರ ರಸ್ತೆ, 3 ನೇಯದಾಗಿ ವೆಂಕಟಲಕ್ಷ್ಮಮ್ಮ ರಾಜಣ್ಣ ವಿಸ್ತೀರ್ಣ ಪೂ-ಪ-15 ಅಡಿ , ಉ-ದ-26 ಅಡಿ ಇದ್ದು ಅದಕ್ಕೆ ಚಕ್ಕುಬಂದಿ ಪೂ-ರಾಮಚಂದ್ರಶೆಟಸ್ಟಿ ರವರ ನಿವೇಶನ , ಪ-ಲಕ್ಷ್ಮಿಪತಿ ನಿವೇಶನ, ಉ-ಶಾಲೆಯ ಕಾಂಪೌಂಡ್ ಮತ್ತು ದ- ಮಧುಗಿರಿ - ಹಿಂದೂಪುರ ರಸ್ತೆ, 4 ನೇಯದಾಗಿ ರಾಮಚಂದ್ರಶೆಟ್ಟಿ ವಿಸ್ತೀರ್ಣ ಪೂ-ಪ-8 ಅಡಿ , ಉ-ದ-26 ಅಡಿ ಇದ್ದು ಅದಕ್ಕೆ ಚಕ್ಕುಬಂದಿ ಪೂ-ನಳಿನ ರವರ ನಿವೇಶನ , ಪ- ವೆಂಕಟಲಕ್ಷ್ಮಮ್ಮ ರವರ ನಿವೇಶನ, ಉ-ಶಾಲೆಯ ಕಾಂಪೌಂಡ್ ಮತ್ತು ದ- ಮಧುಗಿರಿ - ಹಿಂದೂಪುರ ರಸ್ತೆ, 5 ನೇಯದಾಗಿ ಮಲ್ಲಮ್ಮ ಮತ್ತು ರಮೇಶ ಅಂದರೆ (1 ಮತ್ತು 2 ನೇ ಪ್ರತಿವಾದಿಗಳು) ವಿಸ್ತೀರ್ಣ ಪೂ-ಪ-14 ಅಡಿ ಉ-ದ 26 ಅಡಿ ಇದ್ದು ಅದಕ್ಕೆ ಚಕ್ಕುಬಂದಿ ಪೂ-ವೆಂಕಟಲಕ್ಷ್ಮಮ್ಮ ರವರ ನಿವೇಶನ , ಪ-ಮಲ್ಲಮ್ಮನ ನಿವೇಶನ, ಉ-ಶಾಲೆಯ ಕಾಂಪೌಂಡ್ ಮತ್ತು ದ- ಮಧುಗಿರಿ - ಹಿಂದೂಪುರ ರಸ್ತೆ. ದಾವಾ ಆಸ್ತಿಯ ಮೂಲ ಸರ್ವೆ ನಂ-323/3 ಅದರ ವಿಸ್ತೀರ್ಣ 3 ಗುಂಟೆ ಜಮೀನು ಇರುತ್ತದೆ.

2. ನಳಿನಾ ರವರಿಗೆ ನನ್ನ ಹೆಂಡತಿಯ ನಿವೇಶನದ ಪೂರ್ವಕ್ಕೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಪಶ್ಚಿಮಕ್ಕೆ ಕೊಟ್ಟಿರುತ್ತಾರೆಂದು ಉತ್ತರಿಸಿರುತ್ತಾರೆ. ಕ್ರಯ ಪತ್ರದಲ್ಲಿರುವ ಚಕ್ಕುಬಂದಿ ಸರಿ ಇಲ್ಲ ಎಂದು ನಾನು ಅರ್ಜಿ ಸಲ್ಲಿಸಿರುತ್ತೇನೆ ಸದರಿ ಮೇಲ್ಮನವಿ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ, ಸದರಿ ಮೇಲ್ಮನವಿ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ನಳಿನಾ ದಿ. 30/05/2002 ರಂದು ಕ್ರಯ ಪತ್ರದಲ್ಲಿ ಚಕ್ಕುಬಂದಿಯಲ್ಲಿನ ಆಸ್ತಿಯನ್ನು ಕೊಟ್ಟು ನೊಂದಣಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಪೂ-ಪ-14 ಅಡಿ ಉ-ದ-9 ಅಡಿ ಎಂದರೆ ಸರಿ. ದಿ. 12/10/2012 ರಂದು ಪರವಾನಿಗೆ ಸಹ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಳಿನಾ ರವರಿಗೆ ಆಗಿರುವ ಕ್ರಯ ಪತ್ರ ಮತ್ತು ಮಲ್ಲಮ್ಮ ರವರಿಗೆ ಆಗಿರುವ ಕ್ರಯ ಪತ್ರ ದಲ್ಲಿನ ನಿವೇಶನಕ್ಕೆ ಪಂಚಾಯಿತಿಯಿಂದ ಪರವಾನಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಕ್ರಯ ಪತ್ರದಲ್ಲಿರುವ ಚಕ್ಕುಬಂದಿ ಮತ್ತು ಪರವಾನಿಗೆಯಲ್ಲಿರುವ ಚಕ್ಕುಬಂದಿ ಒಂದೇ ಇರುತ್ತದೆ ಎಂದರೆ ಸರಿಯಲ್ಲ.

3. ದಾವಾ ಆಸ್ತಿಯ ವಿರುದ್ಧ ನಳಿನಾ ರವರು ವೆಂಕಟಲಕ್ಷ್ಮಮ್ಮ ರವರ ವಿರುದ್ಧ ಮೂಲ ದಾವೆ ಸಂಖ್ಯೆ-151/2002 ರಂತೆ ಹೂಡಿದ್ದರು ಎಂದರೆ ಸರಿ. ಸದರಿ ದಾವೆ ನಳಿನಾ ಪರ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಆದೇಶದ ವಿರುದ್ಧ ನಾವು ನೂಂದಣಿ ಇಲ್ಲದ ಆರ್.ಎ ನಂಬರ್ 2003 ರಂತೆ ಮೇಲ್ಮನವಿ ಸಲ್ಲಿಸಿದ್ದೇವು ಎಂದರೆ ಸರಿ. ಸದರಿ ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿದ ಕಾರಣ ಅಮಲ್ಜಾರಿ ಸಂಖ್ಯೆ- 78/2003 ರಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ನಳಿನಾ ರವರು ದಾವಾ ಆಸ್ತಿಯ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಅಸಲು ದಾವಾ ಸಂಖ್ಯೆ ನಂ-176/2006 ರಂತೆ ದಾವೆ ಹೂಡಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಳಿನಾ ರವರ ಪರ ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಡಿಕ್ರಿ ವಿರುದ್ಧ ನಾವು ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮೇಲ್ಮನವಿ ಚಾಲ್ತಿಯಲ್ಲಿರುತ್ತದೆ ಅದರ ಸಂಖ್ಯೆ ನನಗೆ ಗೊತ್ತಿರುವುದಿಲ್ಲ.

4. ನಾವು ಸದರಿ ಮೇಲ್ಮನವಿಯಲ್ಲಿ ಬಾಬುರಾವ್ ಎಂಬ ವಕೀಲರನ್ನು ಇಟ್ಟುಕೊಂಡಿದ್ದೇವು. ಸದರಿ ಮೇಲ್ಮನವಿ ಅರ್ಜಿ ಇದೇ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುತ್ತದೆ. ಅಸಲು ದಾವಾ ಸಂಖ್ಯೆ-176/2006 ರ ವಿರುದ್ಧ ನಾವು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಮಲ್ಲಮ್ಮ ಮತ್ತು ರಮೇಶ ರವರು ನಳಿನಾ ರವರ ಕಡೆಯಿಂದ ಖರೀದಿಸಿದ ದಿನದಿಂದಲೂ ಅವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಮಲ್ಲಮ್ಮ ಮತ್ತು ರಮೇಶ ರವರಿಗೆ ಕ್ರಯಪತ್ರದ ಆಸ್ತಿಯಲ್ಲಿ ದಿನಸಿ ಅಂಗಡಿ ಇಟ್ಟುಕೊಂಡಿರುತ್ತಾರೆ ಎಂದರೆ ಸರಿ. ಕ್ರಯ ಪತ್ರದಲ್ಲಿನ ವಿಸ್ತೀರ್ಣದಂತೆ ಅವರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ದಿ. 30/05/2002 ರಂದು ಮತ್ತು 28/10/2002 ರಂತೆ ಮಲ್ಲಮ್ಮ ಮತ್ತು ರಮೇಶ ಇವರು ಕ್ರಯ ಪತ್ರ ಮಾಡಿಕೊಂಡು ಅದರಂತೆ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ.

5. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿನ ವಿಚಾರಗಳು ನನಗೆ ಗೊತ್ತಿರುತ್ತದೆ. 3 ಗುಂಟೆ ಆಸ್ತಿಯಲ್ಲಿ ವೆಂಕಟಲಕ್ಷ್ಮಮ್ಮ ರವರು 5 ನಿವೇಶನ ಮಾಡಿರುತ್ತಾರೆ 6 ನಿವೇಶನ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ 6 ನೇ ನಿವೇಶನ ಇರುವ ಬಗ್ಗೆ ನ್ಯಾಯಾಲಯದ ನಿಯುಕ್ತರನ್ನು ನೇಮಕ ಮಾಡಲು ನನ್ನ ತಕರಾರು ಇರುವುದಿಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ